# ಕನ್ನಡ ನುಡಿಸಿರಿ

## ಕನ್ನಡ ರಾಜ್ಯೋತ್ಸವ



67ನೆ ಕನ್ನಡ ರಾಜ್ಯೋತ್ಸವದ ಆಚರಣೆಯನ್ನು ನಮ್ಮ ಎಕ್ಸೆಲ್ ಪಬ್ಲಿಕ್ ಶಾಲೆಯಲ್ಲಿ ವಿಜೃಂಭಣೆಯಿಂದ ನಡೆಸಲಾಯಿತು. ಎರಡು ವರ್ಷಗಳ ಕಾಲ ಕೊರೋನಾ ದೆಸೆಯಿಂದ ಯಾವುದೇ ತರಹದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯದೆ ಇದ್ದುದರಿಂದ, ಈ ಕಾರ್ಯಕ್ರಮ ಬೇಸಿಗೆಯಲ್ಲಿ ಬಂದ ತಂಪು ಮಳೆಯಂತೆ ಸರ್ವರಿಂದಲೂ ಸ್ವಾಗತಿಸಲ್ಪಟ್ಟಿತು.

ದಿನಾಂಕ 05-11-2022ನೆ ಶನಿವಾರ ನಡೆದ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ನಾಡಿನ ಹೆಸರಾಂತ ಲೇಖಕಿ, ವಿಮರ್ಶಕಿಯಾದ ಶ್ರೀಮತಿ ಅನುಸೂಯ ಕೆಂಪನಹಳ್ಳಿಯವರು ಆಗಮಿಸಿದ್ದರು. ನಮ್ಮ ಶಾಲೆಯ ಪ್ರಾಂಶುಪಾಲರಾದ ಶ್ರೀಯುತ ಮ್ಯಾಥ್ಯು ಕೆ ಜಿ ರವರು ಹಾಗೂ ಸಂಪರ್ಕಾಧಿಕಾರಿಗಳಾದ ಶ್ರೀಯುತ ಪ್ರಶಾಂತ್ ಹೆಚ್ ಎಮ್ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಭಾಕಾರ್ಯಕ್ರಮದ ನಿರ್ವಹಣೆಯನ್ನು ಶ್ರೀಮತಿ ಸಿಂಧೂ ಕೆ ಎಲ್‌ರವರು ನಡೆಸಿಕೊಟ್ಟರು. ಶ್ರೀಯುತ ಪ್ರಶಾಂತ್ ಎನ್ ಅವರು ನೆರೆದ ಜನಸ್ತೋಮವನ್ನು ಸ್ವಾಗತಿಸಿದರು. ಕುಮಾರಿ ಅನ್ವೀಕ್ಷಾ ನಾಯಕ್ ಎಂಬ ವಿದ್ಯಾರ್ಥಿನಿ ಕನ್ನಡ ನಾಡು-ನುಡಿ, ಸಂಸ್ಕೃತಿಯನ್ನು ಕುರಿತು ಮಾತನಾಡಿದರು. ಶ್ರೀಮತಿ ಜಯಂತಿ ಎಂ ಎನ್‌ರವರು ಮುಖ್ಯ ಅತಿಥಿಗಳ ಪರಿಚಯುವನ್ನು ಮಾಡಿಕೊಟ್ಟರು. ಮುಖ್ಯ ಅತಿಥಿಗಳಾದ ಅನಸೂಯ ಕೆಂಪನಹಳ್ಳಿಯವರು ನಾನು ಅನ್ಯಭಾಷೆಗಳನ್ನು ದ್ವೇಷಿಸುತ್ತಿಲ್ಲ ಎಂಬ ಮಾತಿನೊಂದಿಗೆ ತಮ್ಮ ಭಾಷಣವನ್ನು ಪ್ರಾರಂಭಿಸಿ ಕನ್ನಡಿಗರು ಸ್ವಾಭಿಮಾನಿಗಳಾಗಿ ಹೇಗೆ ಬದುಕಬೇಕು ಮತ್ತು ನಮ್ಮ ಪರಂಪರೆಯನ್ನು ಉಳಿಸಿ ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆಯ ಬಗ್ಗೆ ಮಾತನಾಡಿ ನೆರೆದಿದ್ದ ಪ್ರೇಕ್ಷಕರಿಗೆ ವಾಸ್ತವತೆಯ ಅರಿವು ಮೂಡಿಸಿ; ಕನ್ನಡ ನೆಲದ ಉಳಿವಿಗಾಗಿ ಕಂಕಣಬದ್ಧರಾಗೋಣ ಎಂದು ಹೇಳಿದರು. ಸುಮಾರು ಒಂದೂವರೆ ಗಂಟೆಗಳ ಕಾಲ ನಡೆದ ಸಭಾಕಾರ್ಯಕ್ರಮದ ಕೊನೆಯಲ್ಲಿ ಶ್ರೀಯುತ ಕರ್ನಲ್ ಬಿ ಚೇತನ್ ರವರು ವಂದನಾರ್ಪಣೆಯನ್ನು ಸಲ್ಲಿಸಿದರು.

ಸಭಾಕಾರ್ಯಕ್ರಮದ ತರುವಾಯ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳಿಂದ ಪ್ರಸ್ತುತಪಡಿಸಲ್ಪಟ್ಟವು. ಭಾರತದ ಸ್ವಾತಂತ್ರ್ಯ ಅಮೃತಮಹೋತ್ಸವವನ್ನು ಮುಖ್ಯ ವಿಷಯವಾಗಿ ಇಟ್ಟುಕೊಂಡು ಕನ್ನಡಿಗರು ಭಾರತಕ್ಕೆ ವಿವಿಧ ಕ್ಷೇತ್ರಗಳಲ್ಲಿ ನೀಡಿದ ಕೊಡುಗೆಗಳನ್ನು ಮಕ್ಕಳು ಸುಂದರ ಕಾರ್ಯಕ್ರಮಗಳ ಮೂಲಕ ನಿರೂಪಿಸಿದರು. ಸಂಗೊಳ್ಳಿ ರಾಯಣ್ಣನ ನೃತ್ಯರೂಪಕ, ರೈತರ, ಸೈನಿಕರ ಜೀವನ, ಕನ್ನಡದ ವಿವಿಧ ಜಾನಪದ ಪ್ರಕಾರಗಳಾದ ಕಂಸಾಳೆ, ಪೂಜಾಕುಣಿತ, ಯಕ್ಷಗಾನ, ಡೊಳ್ಳುಕುಣಿತ ಮುಂತಾದ ಕಾರ್ಯಕ್ರಮಗಳು ನೆರೆದ ಜನರ ಮನಸೂರೆಗೊಂಡವು.

# ಕನ್ನಡ ರಾಜ್ಯೋತ್ಸವ ಭಾಷಣ

– ಡಾ. ಅನಸೂಯ ಕೆಂಪನಹಳ್ಳಿ



ಈ ಸುಂದರ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿದ ಹೆಮ್ಮೆಯ ಎಕ್ಸೆಲ್ ಪಬ್ಲಿಕ್ ಶಾಲೆಯ ಆಡಳಿತ ಮಂಡಳಿಗೆ ನನ್ನ ಅನಂತ ಧನ್ಯವಾದಗಳು. ವೇದಿಕೆಯನ್ನು ಅಲಂಕರಿಸಿರುವ ಶ್ರೀಯುತರಾದ ಹೆಚ್ ಎಂ ಪ್ರಶಾಂತ್‌ರವರಿಗೂ, ಪ್ರಾಂಶುಪಾಲರಾದ ಮ್ಯಾಥ್ಯೂ ಕೆ ಜಿ ಅವರಿಗೂ ಹಾಗೂ ಆಡಳಿತಾಧಿಕಾರಿಗಳಾದ ಕರ್ನಲ್ ಚೇತನ್ ಅವರಿಗೂ ನಮಿಸುತ್ತ ನನ್ನೆರಡು ಮಾತುಗಳನ್ನು ಪ್ರಾರಂಭಿಸುತ್ತೇನೆ.

ಮೊದಲು ನಾವಿಲ್ಲಿ ನೆರೆದಿರುವ ಉದ್ದೇಶವನ್ನು ತಿಳಿಯಬೇಕು. ಇಂದು ಕನ್ನಡ ನಾಡು ಒಗ್ಗೂಡಿದ ದಿನ. ಕನ್ನಡದ ಸೇವೆಗಾಗಿ ದುಡಿದ ಮಹನೀಯರನ್ನು ನೆನೆಯಲು ನಾವೆಲ್ಲ ಇಲ್ಲಿ ನೆರೆದಿದ್ದೇವೆ. ಈ ಸುದಿನದಂದು ತಮ್ಮೆಲ್ಲರಿಗೂ ರಾಜ್ಯೋತ್ಸವದ ಶುಭಾಶಯಗಳನ್ನು ಕೋರಲು ಹರ್ಷಿಸುತ್ತೇನೆ.

ಕನ್ನಡದ ಮಹತ್ವವನ್ನು ತಿಳಿಯುವ ಮೊದಲು ತಮ್ಮೆಲ್ಲರ ಧ್ವನಿಯನ್ನು ಕೇಳಬೇಕೆಂಬ ಆಸೆ ನನ್ನದು. ಹಾಗಾಗಿ ನಾನು ಹೇಳಕೊಡುವ ಮಾತುಗಳನ್ನು ಹೇಳಿ:

“ಎದೆ ತಟ್ಟಿ ಹೇಳುತ್ತೇನೆ; ನಾನು ಭಾರತೀಯನೆಂದು. ಗರ್ವದಿಂದ ಬಾಳುತ್ತೇನೆ; ನಾನು ಕನ್ನಡಿಗನೆಂದು. ಸಾವಿರ ಭಾಷೆ ನನ್ನ ನಾಲಿಗೆಯಲ್ಲಿರಲಿ; ಕನ್ನಡಭಾಷೆ ಮಾತ್ರ ನನ್ನ ಹೃದಯದಲ್ಲಿರಲಿ. ಎಂಥಹ ಸಂದರ್ಭವೇ ಬರಲಿ, ನಾನು ಕನ್ನಡನಾಡು ನುಡಿಗಾಗಿ ದುಡಿಯುತ್ತೇನೆ. ನನ್ನ ಓದು ಸಾಧನೆಯ ಮೂಲಕ ಕನ್ನಡದ ಕೀರ್ತಿಪತಾಕೆಯನ್ನು ಮುಗಿಲೆತ್ತರಕ್ಕೆ ಹಾರಿಸುತ್ತೇನೆ. ಎಂತಹ ದುಃಸ್ಥಿತಿ ಎದುರಾದರೂ ನನ್ನ ಭಾರತಮಾತೆಗೆ, ನನ್ನ ಕನ್ನಡ ಮಾತೆಗೆ, ನನ್ನ ಕುಟುಂಬಕ್ಕೆ, ನನ್ನ ಶಾಲೆಗೆ, ಕಪ್ಪು ಚುಕ್ಕಿ ತಗುಲದಂತೆ ಬಾಳುತ್ತೇನೆ.” ಈ ಮಾತುಗಳು ಸದಾ ನಿಮ್ಮ ಹೃದಯದಲ್ಲಿ ನೆಲೆಸಲಿ. ಕನ್ನಡ ನಾಡಿನ ಹಿರಿಮೆ ಗರಿಮೆ ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ಇತ್ತೀಚಿನ ಸಂಶೋಧನೆಯ ಪ್ರಕಾರ ಸಿಂಧೂ ಬಯಲಿನ ನಾಗರೀಕತೆಯ ಕಾಲದಲ್ಲಿ ಸಿಕ್ಕಿದ ಪುರಾವೆಗಳು ಕನ್ನಡ ನೆಲದ ಉಲ್ಲೇಖವನ್ನು ಮಾಡುತ್ತಿವೆ. ಇದು ಮಾನ್ಯವಾದರೆ ನಮ್ಮ ಕನ್ನಡಿಗರಿಗೆ ಮತ್ತೊಂದು ಗರಿ ಮೂಡಿದಂತೆ! ಹೀಗಿರುವಾಗ ನಾವು ನಮ್ಮತನವನ್ನು ಬಿಟ್ಟು ಅನ್ಯತನದಲ್ಲಿ ಬದುಕುವ ಜಾಯಮಾನಕ್ಕೆ ಒಗ್ಗಿಕೊಂಡಿರುವುದು ಇಂದಿನ ಮಟ್ಟಿಗೆ ದುರಂತ.

ನಾನು ಅನ್ಯಭಾಷೆಗಳನ್ನು ದ್ವೇಷಿಸುತ್ತಿಲ್ಲ. ನಮ್ಮ ಭಾಷೆಯ ಅಭಿಮಾನದಿಂದ, ಶ್ರೇಷ್ಠತೆಯನ್ನು ತಿಳಿಯಬೇಕಾಗಿರುವುದರ ಅನಿವಾರ್ಯತೆಯಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ. ಕನ್ನಡ ನುಡಿಯ ಒಂದೊಂದು ಅಕ್ಷರವೂ ವೈಜ್ಞಾನಿಕ ಸಂಯೋಜನೆಯಿಂದ ರೂಪುಗೊಂಡಿದ್ದು ಎನಿಸುತ್ತದೆ. ಉದಾಹರಣೆಗೆ ‘ಅಮ್ಮ’ ಎಂಬ ಶಬ್ಧವು ಹೊಕ್ಕಳುವಿನಲ್ಲಿ ಹುಟ್ಟುವುದನ್ನು ಅನುಭವಿಸಬಹುದು. ಆಂಗ್ಲ ಭಾಷೆಯ ‘ಮಮ್ಮಿ’ ಹುಟ್ಟುವ ಪರಿಯನ್ನು ಗಮನಿಸಿ; ಅದು ತುಟಿಯಲ್ಲಿ ಹುಟ್ಟಿ ತುಟಿಯಲ್ಲೇ ಅಂತ್ಯವಾಗುತ್ತದೆ. ಕನ್ನಡ ನುಡಿಯ ಬರೆವಣಿಗೆಯ ಶೈಲಿ ವಿಶಿಷ್ಟತೆಯಿಂದ ಕೂಡಿದ್ದು ಸುಂದರವಾಗಿ ರೂಪಿಸಲ್ಪಟ್ಟಿದೆ. ಹಾಗಾಗಿಯೇ ‘ವಿಶ್ವಲಿಪಿಗಳ ರಾಣಿ’ ಎಂದು ಹೆಸರಾಗಿದೆ.

ಕನ್ನಡ ನೆಲವನ್ನಾಳಿದ ರಾಜ ಮಹಾರಾಜರ ಕೊಡುಗೆ ಶ್ಲಾಘನೀಯ. ಕನ್ನಡ ಸಾಹಿತ್ಯ ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂಬ ಪ್ರಕಾರಗಳಲ್ಲಿ ಅಭ್ಯಸಿಸುವಾಗ ಪಂಪ, ರನ್ನ, ಕುಮಾರವ್ಯಾಸರಾದಿಯಾಗಿ ಬಸವಣ್ಣ, ಮಧ್ವಾಚಾರ್ಯರು, ಕನಕದಾಸರು, ಪುರಂದರದಾಸರು ಮತ್ತಿತರ ದಾಸಶ್ರೇಷ್ಠರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರನ್ನು ನಾವು ಸ್ಮರಿಸಿಕೊಳ್ಳಬೇಕು. ಕನ್ನಡ ನಾಡು ಒಂದುಗೂಡಲು ಹಿರಿಯರು ಮಾಡಿದ ತ್ಯಾಗದ ಪ್ರತಿರೂಪ ಈ ರಾಜ್ಯೋತ್ಸವ ಎಂಬುದನ್ನು ಮರೆಯಬಾರದು.


ಕನ್ನಡ ನಾಡು ಹಲವಾರು ಪರಂಪರೆ, ನಂಬಿಕೆ, ಸಂಸ್ಕೃತಿಗೆ ಹೆಸರಾದ ನೆಲ. ಕರ್ನಾಟಕದ ನಮ್ಮ ಪೂರ್ವಿಕರು ಹೊಂದಿದ್ದ ಘನತೆ ನಮ್ಮಲ್ಲಿ ಕಡಿಮೆಯಾಗುತ್ತ ಬಂದಿರುವುದಕ್ಕೆ ಕಾರಣ ನಮ್ಮಲ್ಲಿನ ಅಸಡ್ಡೆ ಮತ್ತು ಕೀಳರಿಮೆಗಳಾಗಿವೆ. ಹಾಗಾಗಿ ನಾವು ನಮ್ಮತನವನ್ನು ಕಳೆದುಕೊಳ್ಳದೆ, ವಾಸ್ತವತೆಯ ಅರಿವಿನೊಂದಿಗೆ ಕನ್ನಡ ನೆಲದ ಉಳಿವಿಗಾಗಿ ಕಂಕಣಬದ್ಧರಾಗೋಣ. ಆಧುನಿಕತೆಯ ಹೆಸರಿನಲ್ಲಿ ನಮ್ಮವರನ್ನು ಕೀಳಾಗಿ ಕಾಣುವುದು ಬೇಡ. ಓದು ಒಂದು ತಪಸ್ಸಿದ್ದಂತೆ, ಅದನ್ನು ಪರಿಪೂರ್ಣವಾಗಿ ಕಲಿಯಬೇಕು. ಮಾತೃಭಾಷೆಗೆ ಮೋಸಮಾಡಿದರೆ ನಮ್ಮ ಹೆತ್ತತಾಯಿಗೆ ದ್ರೋಹ ಬಗೆದಂತೆ. ಕನ್ನಡವನ್ನು ಕಲಿಯೋಣ, ಕನ್ನಡವನ್ನು ಉಳಿಸೋಣ, ಕನ್ನಡವನ್ನು ಬೆಳೆಸೋಣ.

## ನಿಮಗಿದು ಗೊತ್ತೇ?




ಮೈಸೂರು ಅರಮನೆಯ ಪಾಕಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಕಾಕಾಸುರ ಮಾದಪ್ಪನವರು 'ಮೈಸೂರು ಪಾಕ್' ಕಂಡುಹಿಡಿದರು. ಇವರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಜಯಚಾಮರಾಜ ಒಡೆಯರ್ ಆಡಳಿತಾವಧಿಯಲ್ಲಿ ಅರಮನೆಯ ಸಿಹಿತಿಂಡಿ ತಯಾರಿಸುವ ಕೆಲಸದ ಜವಾಬ್ದಾರಿ ವಹಿಸಿಕೊಂಡಿದ್ದರು. ರಾಜ ಕುಟುಂಬಕ್ಕೆ ಬೇಕಾದ ಸಿಹಿ ಮತ್ತು ಖಾರವನ್ನು ಇವರೇ ತಯಾರಿಸುತ್ತಿದ್ದರು. ಒಮ್ಮೆ ಮಹಾರಾಜರು ತಿಂಡಿ ತಯಾರಿಸುವುದರಲ್ಲಿ ಜಾಣ್ಮೆ ಹೊಂದಿದ್ದ ಕಾಕಾಸುರ ಮಾದಪ್ಪನವರಿಗೆ ಹೊಸದಾದ ಯಾವುದಾದರೂ ತಿಂಡಿಯನ್ನು ತಯಾರಿಸುವಂತೆ ಆಜ್ಞೆ ಮಾಡಿದರು. ಮಹಾರಾಜರು ಹೇಳಿದ ಮೇಲೆ ಮುಗಿಯಿತು. ಮರು ಮಾತನಾಡುವ ಹಾಗೇ ಇಲ್ಲ. ಹೀಗಾಗಿ ಯಾವ ಹೊಸ ತಿಂಡಿಯನ್ನು ತಯಾರಿಸುವುದು ಎಂದು ಅವರು ಆಲೋಚಿಸತೊಡಗಿದರು. ತಮಗೆ ತೋಚಿದ ತಿಂಡಿ ತಯಾರಿಸಲು ಕಾಕಾಸುರ ಮಾದಪ್ಪ ಮುಂದಾದರು.

ಕಡಲೆಹಿಟ್ಟು, ಸಕ್ಕರೆ, ತುಪ್ಪ, ಎಣ್ಣೆ ಸೇರಿಸಿ ತಿಂಡಿಯೊಂದನ್ನು ಮಾಡಿ ಅದನ್ನು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಕೊಟ್ಟರು. ಇದರ ರುಚಿ ನೋಡಿದ ಮಹಾರಾಜರಿಗೆ ತುಂಬಾ ಖುಷಿಯಾಗಿ ಕಾಕಾಸುರ ಮಾದಪ್ಪನವರನ್ನು ಬೆನ್ನು ತಟ್ಟಿ ಪ್ರಶಂಸಿಸಿದರು. ಆದರೆ ಈ ಹೊಸ ತಿಂಡಿಗೆ ಏನಾದರೊಂದು ಹೆಸರಿಡಬೇಕಲ್ಲವೇ? ಏನು ಹೆಸರು ಇಡುವುದೆಂದು ಮಹಾರಾಜರು ಆಲೋಚಿಸತೊಡಗಿದರು. ಆಗ ಅವರಿಗೊಂದು ಯೋಚನೆ ಬಂದಿತು. ರುಚಿಶುಚಿಯಾದ ಅಡುಗೆಗೆ 'ನಳಪಾಕ' ಎಂದು ಕರೆಯುತ್ತೇವೆ. ಇದು ಮೈಸೂರು ಅರಮನೆಯಲ್ಲಿ ತಯಾರಾಗಿದ್ದರಿಂದ ಇದಕ್ಕೆ 'ಮೈಸೂರು ಪಾಕ' ಎಂದು ಹೆಸರಿಡಲು ನಿರ್ಧರಿಸಿದರು. ಅದೇ ಆನಂತರ 'ಮೈಸೂರು ಪಾಕ್' ಆಯಿತು.




– ಶ್ರೇಯಾ ಎಂ ಎಸ್
೯ನೆ ತರಗತಿ 'ಇ' ವಿಭಾಗ

## ನಮ್ಮೂರಿನ ಹೆಮ್ಮೆ – ಎಸ್ ಎಲ್ ಭೈರಪ್ಪ



'ಸರಸ್ವತಿ ಸಮ್ಮಾನ್' ಎಂಬ ಪ್ರಶಸ್ತಿಗೆ ಭಾಜನರಾದ ಇಬ್ಬರು ಕನ್ನಡಿಗರಲ್ಲಿ ಡಾ. ಎಸ್ ಎಲ್ ಭೈರಪ್ಪನವರು ಮೊದಲಿಗರು ಎಂದು ಹೇಳಲು ಬಹಳ ಸಂತಸವಾಗುತ್ತದೆ. ಸಂತೇಶಿವರ ಲಿಂಗಣ್ಣಯ್ಯ ಭೈರಪ್ಪನವರು ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿಕಾರರು ಮತ್ತು ಲೇಖಕರು. ಕನ್ನಡ ಭಾಷೆಯಲ್ಲಿ ಪುಸ್ತಕಗಳನ್ನು ಬರೆದಿರುವ ಇವರ ಕೃತಿಗಳು ಇಂಗ್ಲಿಷ್ ಹಾಗೂ ಇತರ ಭಾಷೆಗಳಿಗೂ ಅನುವಾದಗೊಂಡಿರುವುದರಿಂದ ಭಾರತದ ಸಾಹಿತ್ಯವಲಯದಲ್ಲಿಯೂ ಹೆಸರಾಗಿದ್ದಾರೆ. ಇವರ ಕಾದಂಬರಿಗಳು ಹಲವಾರು ಮರುಮುದ್ರಣಗಳನ್ನು ಕಂಡು ಕನ್ನಡದ ಜನಪ್ರಿಯ ಬರಹಗಾರರಾಗಿದ್ದಾರೆ. ಅವರು ಬರೆದಿರುವ ಕೃತಿಗಳಲ್ಲಿ ನಾನು ಮೊದಲು ಓದಿದ್ದು "ತಬ್ಬಲಿಯು ನೀನಾದೆ ಮಗನೆ" ಎಂಬುದು. ಆ ಕೃತಿಯು ಗೋವಿನ ಹಾಡಿನ ಮೂಲಕ ಪ್ರಾರಂಭಗೊಳ್ಳುವುದರಿಂದ ನನ್ನನ್ನು ಬಹಳ ಆಕರ್ಷಿಸಿತು. ಅನಂತರ ಅವರು ಪಾತ್ರಗಳನ್ನು ಪರಿಚಯಿಸಿ ಕೊಡುವ ರೀತಿ, ಕಥೆಯನ್ನು ಹೆಣೆಯುವ ರೀತಿ ನನ್ನನ್ನು ಬೇರೆ ಲೋಕಕ್ಕೆ ಕರೆದುಕೊಂಡು ಹೋಯಿತು. ಅವರ ಭಾಷಾಶೈಲಿ ಹಾಗೂ ದೃಷ್ಟಿಕೋನ ನನ್ನ ಮೇಲೆ ದೊಡ್ಡ ಪ್ರಭಾವವನ್ನು ಬೀರಿತು. ಈ ಕೃತಿಯ ಅನಂತರ ಅವರು ಬರೆದಿರುವ ನಾಯಿನೆರಳು ಹಾಗೂ ಆವರಣವನ್ನು ಓದಲಾರಂಭಿಸಿದೆ.

ಅವರ ಪುಸ್ತಕಗಳು ಸಮಾಜದಲ್ಲಿ ಇರುವ ತೊಂದರೆಗಳು, ವಿವಿಧ ಪರಿಸ್ಥಿತಿ ಹಾಗೂ ಮನಸ್ಥಿತಿಗಳ ಕನ್ನಡಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಹಲವಾರು ದೃಷ್ಟಿಕೋನವನ್ನು ಸೂಕ್ಷ್ಮವಾಗಿ ಗಮನಿಸಿ, ಅವುಗಳೆಲ್ಲವನ್ನು ಒಂದೇ ಕಥೆಯಲ್ಲಿ ವ್ಯಕ್ತಪಡಿಸುವುದೇ ಅವರ ಕೃತಿಗಳ ವಿಶೇಷತೆಯಾಗಿದೆ. ಅವರ ಕೃತಿಗಳನ್ನು ಓದುತ್ತಾ ಹೋದಂತೆ ನಮ್ಮ ಸುತ್ತಲಿರುವ ತೊಂದರೆಗಳೇನೆಂಬುದನ್ನು ತಿಳಿಸಿಕೊಡುತ್ತವೆ. ಸಮಾಜದಲ್ಲಿ ಮೂಡಿರುವ ಬಿರುಕುಗಳು ಮತ್ತು ಗೋಡೆಗಳ ಮೀರಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಸ್ಫೂರ್ತಿಯನ್ನು ನೀಡುತ್ತವೆ. ಭೈರಪ್ಪನವರು ಸಾಹಿತ್ಯಕ್ಕೆ ನೀಡಿರುವ ಕೊಡುಗೆಗೆ ಹಲವಾರು ಪ್ರಶಸ್ತಿಗಳು ಸಂದಿವೆ. 'ವಂಶವೃಕ್ಷ' ಎಂಬ ಕಾದಂಬರಿಗೆ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿಗಳು ಲಭಿಸಿವೆ. ಅವರ ಆತ್ಮಚರಿತ್ರೆಯಾದ 'ಭಿತ್ತಿ' ಹೆಸರುವಾಸಿಯಾಗಿದೆ. ಇಂತಹ ಸಾಧಕರು ನಮ್ಮ ಮೈಸೂರಿನವರು ಎಂಬುದೇ ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿಯಾಗಿದೆ.



– ಮೌಲ್ಯ ಎಸ್ ಗೌಡ
10ನೆ ತರಗತಿ 'ಇ' ವಿಭಾಗ

## ಕನ್ನಡ ನಾಡು ನುಡಿ




'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ಎಂಬಂತೆ ಕನ್ನಡ ನಾಡಿನ ಕಂಪು ಎಲ್ಲೆಲ್ಲೂ ಹರಡಿದೆ. ಕನ್ನಡ ಕನ್ನಡ ಎನ್ನುವ ಕೂಗು ಪ್ರತಿಯೊಂದು ದಿಕ್ಕಿನಲ್ಲಿಯೂ ಕೇಳುತ್ತಿದೆ. ಭುವನೇಶ್ವರಿಯ ಮಹಿಮೆ ಇಡೀ ಜಗತ್ತಿಗೆ ಗೊತ್ತು. ಕನ್ನಡವೆಂದರೆ ಸಾಕು ಕನ್ನಡಿಗರಲ್ಲಿ ಹೊಸ ರಕ್ತ ಸಂಚಾರವಾಗುತ್ತದೆ. ಕನ್ನಡವೆಂಬ ಪದವೇ ಕೇಳಲು ಇಂಪಾಗಿದೆ. ಕನ್ನಡ ಭಾಷೆಗೆ ಅದರದ್ದೇ ಆದ ಇತಿಹಾಸವಿದೆ. ಕನ್ನಡ ನಾಡಿನ ಜನರು ಮುಗ್ಧರು.

ಕನ್ನಡನಾಡಿನಲ್ಲಿ ಅಕ್ಷರಾಭ್ಯಾಸ ಮಾಡದ ಜನರೂ ಕೂಡ ಚುರುಕು ಬುದ್ಧಿಯವರು. ಕನ್ನಡನಾಡಿನಲ್ಲಿ ಮಾವು, ತೆಂಗು, ಅಡಕೆ, ಮಲ್ಲಿಗೆ, ಹೂಬಳ್ಳಿಗಳಿವೆ. ಹಲವಾರು ಶ್ರೇಷ್ಠ ಕವಿಗಳಿಗೆ ಕನ್ನಡ ತಾಯಿ ಸ್ಫೂರ್ತಿಯಾಗಿದ್ದಾಳೆ, ಕನ್ನಡನಾಡು ಜನಪದ ಕಲೆಗಳ ಮನೆಯಾಗಿದೆ. ಕನ್ನಡನಾಡಿನಲ್ಲಿ ಹುಟ್ಟಿದರೆ ಮೋಕ್ಷ ಪಡೆದ ಹಾಗೆ. ಇಲ್ಲಿನ ಸಸ್ಯ ಶ್ಯಾಮಲತೆ ಹಾಗೂ ಪ್ರಕೃತಿಸೌಂದರ್ಯ ವಿದೇಶಿಯರನ್ನು ಕೈಬೀಸಿ ಕರೆಯುತ್ತಿದೆ. ರಾಷ್ಟ್ರಕವಿಗಳಾದ ಗೋವಿಂದ ಪೈ, ಕುವೆಂಪು ಮತ್ತು ಜಿ ಎಸ್ ಶಿವರುದ್ರಪ್ಪನವರು ಹಾಗೂ ಅನೇಕ ಕವಿಗಳಿಗೆ, ಸಾಹಿತಿಗಳಿಗೆ ಕನ್ನಡ ನಾಡು ಜನ್ಮ ನೀಡಿದೆ. ಕನ್ನಡ ನಾಡು ಸಂಪತ್ಭರಿತವಾದ ನಾಡಾಗಿದ್ದು ಇಲ್ಲಿ ಚಿನ್ನ, ವಜ್ರಗಳು ದೊರೆಯುತ್ತವೆ. ಆದರೆ ಇಲ್ಲಿನ ಜನರು ನಿಜವಾದ ಚಿನ್ನ, ವಜ್ರಗಳು. ಕನ್ನಡ ನಾಡಿನಲ್ಲಿ ಜನಿಸಿದರೆ, ಅದು ಹಲವಾರು ಜನ್ಮಗಳ ಪುಣ್ಯದ ಫಲ.



ಕನ್ನಡನಾಡು ವೀರ ಯೋಧರನ್ನು ಹಾಗೇ ಸ್ವಾತಂತ್ರ್ಯ ಹೋರಾಟಗಾರರನ್ನು ಭಾರತಕ್ಕೆ ಕೊಡುಗೆಯಾಗಿ ನೀಡಿದೆ. ಇಲ್ಲಿನ ಊಟದ ರುಚಿ ಜಗತ್ತಿನ ಇನ್ನಾವುದೇ ಮೂಲೆಯಲ್ಲೂ ಸಿಗುವುದಿಲ್ಲ. ಕನ್ನಡ ನಾಡು – ನುಡಿ ದೇವರು ಭಾರತಕ್ಕೆ ನೀಡಿದ ವರದಾನವಾಗಿದೆ. ಕನ್ನಡನಾಡೆಂಬ ಪುಣ್ಯಕ್ಷೇತ್ರ ಕನ್ನಡಿಗರ ಹೆಮ್ಮೆ. ಇಂತಹ ಶ್ರೇಷ್ಠವಾದ ನಾಡುನುಡಿಯನ್ನು ಕನ್ನಡಿಗರಾದ ನಾವು ಉಳಿಸಿಕೊಂಡು ಬರಬೇಕಾಗಿದೆ. ಕನ್ನಡವನ್ನೇ ನಾವು ಉಸಿರಾಡಬೇಕಿದೆ. ಕನ್ನಡನಾಡನ್ನು ಸಂರಕ್ಷಿಸಬೇಕಾಗಿರುವುದು ನಮ್ಮ ಕೆಲಸ. ಕನ್ನಡಮಾತೆಯನ್ನು ಮನಸಾರೆ ಪ್ರೀತಿಸುವುದು ನಮ್ಮ ಕರ್ತವ್ಯ. ಕನ್ನಡನಾಡು ಮತ್ತು ನುಡಿಯ ಮೇಲೆ ನಮಗೆ ಅಪಾರವಾದ ಗೌರವ ಮತ್ತು ಅಭಿಮಾನವಿರಬೇಕು. ನಾನೊಬ್ಬಳು ಕನ್ನಡತಿ ಎಂದು ಹೇಳಿಕೊಳ್ಳಲು ತುಂಬ ಖುಷಿಯಾಗುತ್ತದೆ.

**"ಎಲ್ಲೇ ಇರು, ಹೇಗೆ ಇರು ನೀ ಎಂದೆಂದಿಗೂ ಕನ್ನಡವಾಗಿರು."**

– ಇಂಪನ ವಿ
10ನೆ ತರಗತಿ 'ಎ' ವಿಭಾಗ

## ನನ್ನಾಸೆ

ಆಸೆ ಎಂದರೆ ಜೀವನದಲ್ಲಿರುವ ಒಂದು ಸಾಮಾನ್ಯವಾದ, ಅಷ್ಟೇ ಮುಖ್ಯವಾದ ಅಂಶ. ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ತನ್ನದೇ ಆದ ಒಂದು ಆಸೆ ಇರುತ್ತದೆ. ಹಲವಾರು ಸಂದರ್ಭಗಳಲ್ಲಿ ತಂದೆ – ತಾಯಿಯ ಆಸೆಗಳನ್ನೇ ತಮ್ಮ ಆಸೆಗಳೆಂದು ಸ್ವೀಕರಿಸುವ ಜನರನ್ನು ನಾವು ಕಾಣಬಹುದು. ನಮ್ಮ ಹೃದಯದಲ್ಲಿ ಹಲವಾರು ಆಸೆಗಳಿರುತ್ತವೆ. ಆದರೆ ಯಾವುದಾದರೊಂದು ಆಸೆಯ ಕಡೆಗೆ ನಮ್ಮ ಗಮನವನ್ನು ಹರಿಸಿದಾಗ ನಮ್ಮ ಶ್ರಮವೆಲ್ಲ ಆ ಒಂದು ಆಸೆಯನ್ನು ಈಡೇರಿಸುವುದರ ಕಡೆಗೆ ಹೋಗುವ ಸಾಧ್ಯತೆ ಹೆಚ್ಚಿರುತ್ತದೆ.

ಚಿಕ್ಕ ವಯಸ್ಸಿನಿಂದಲೂ ನನಗೆ ನನ್ನ ಭಾರತ ದೇಶದ ಮೇಲೆ ಅತೀವವಾದ ಪ್ರೀತಿ, ಗೌರವ ಹಾಗೂ ಹೆಮ್ಮೆ. ನನ್ನ ದೇಶಕ್ಕೆ ಏನೇ ಒಳ್ಳೆಯದಾದರೂ ನನ್ನ ಮನಸ್ಸಿನಲ್ಲಿ ಒಂದು ಹೊಸ ಹುರುಪು ಉಂಟಾಗುತ್ತದೆ. ನನ್ನ ಅನೇಕ ಸ್ನೇಹಿತರ ಅಥವಾ ಪರಿಚಿತರ ಆಸೆಗಳೇನು ಎಂದು ಕೇಳಿದಾಗ ವಿದೇಶಕ್ಕೆ ಹಾರಬೇಕೆಂಬುದೇ ತಮ್ಮಾಸೆ ಎಂದು ಹೇಳುತ್ತಾರೆ. ಆ ಆಸೆಗಳನ್ನು ಕೇಳಿದಾಗ ನನ್ನ ಮನಸ್ಸಿಗೆ ಬಹಳ ನೋವುಂಟಾಗುತ್ತದೆ. ನಮ್ಮ ಭಾರತ ದೇಶದಲ್ಲಿ ಇಲ್ಲದಿರುವಂತಹದ್ದು ಬೇರೆ ದೇಶಗಳಲ್ಲಿ ಏನಿದೆ? ಎಂಬ ಪ್ರಶ್ನೆ ಸದಾ ನನ್ನನ್ನು ಕಾಡುತ್ತದೆ. ಇದಕ್ಕೆ ಸೂಕ್ತವಾದ ಉತ್ತರವನ್ನು ಹುಡುಕುತ್ತಾ ಹೋದ ಹಾಗೆ ನನ್ನ ಆಸೆಯು ಒಂದು ಸ್ಪಷ್ಟ ರೂಪ ಪಡೆಯತೊಡಗಿತು.



ನನ್ನ ಆಸೆ ಏನೆಂದರೆ, ನಮ್ಮ ದೇಶದಲ್ಲಿರುವ ಅನೇಕ ಅವಕಾಶಗಳನ್ನು ಗುರುತಿಸಿ ಅದನ್ನು ಜನಸಾಮಾನ್ಯರಿಗೆ ಅರಿವಾಗುವಂತೆ ಮಾಡಿ, ಹೊಸ ಹೊಸ ವಿಚಾರಗಳೊಂದಿಗೆ ನಮ್ಮ ದೇಶವು ಜಗತ್ಪ್ರಸಿದ್ಧಿಯಾಗುವಂತೆ ಮಾಡುವ ಮೂಲಕ ನಾವು ಭಾರತೀಯರೆಂಬ ಹೆಮ್ಮೆ ಜನಮಾನಸದಲ್ಲಿ ಮೂಡುವಂತೆ ಮಾಡುವುದು. ನಾನು ಏನನ್ನೇ ಮಾಡಿದರೂ ಭಾರತಮಾತೆಯು ಹೆಮ್ಮೆ ಪಡುವಂತೆ ಮಾಡಬೇಕೆಂಬುದೇ ನನ್ನಾಸೆ. ನಮ್ಮ ದೇಶದ ಜನರು ವಿಶಾಲವಾದ ಮನೋಭಾವವನ್ನು ಹೊಂದಿದ್ದು, ಶ್ರೇಷ್ಠವಾದ ಇತಿಹಾಸವನ್ನು ಹೊಂದಿದ್ದಾರೆ. ಇದನ್ನು ಪ್ರತಿಯೊಬ್ಬರಿಗೂ ಅರ್ಥಮಾಡಿಸಬೇಕೆಂಬುದೇ ನನ್ನ ಆಸೆ.

– ದಿವ್ಯಾ ಸತೀಶ್
೯ನೆ ತರಗತಿ 'ಇ' ವಿಭಾಗ

## ಕನ್ನಡ ಭಾಷೆಯ ಸೊಬಗು

ಕನ್ನಡವನ್ನು ಕಲಿಯುವುದು ಅಷ್ಟೇನು ಕಠಿಣವಲ್ಲ. ಕನ್ನಡವನ್ನು ಬರೆಯುವುದು ಸುಲಭ ಹಾಗು ಮಾತನಾಡುವುದು ಸುಲಭ. ನಾವು ಉಚ್ಚರಿಸುವುದನ್ನೇ ಬರೆವಣಿಗೆಯಲ್ಲಿ ತೋರಿಸುತ್ತೇವೆ. ಇದೇ ಕನ್ನಡ ಭಾಷೆಯ ಸರಳತೆ ಹಾಗು ಸೊಬಗು.


17ನೆ ಶತಮಾನದಲ್ಲಿ ಕವಿ ಮಹಾಲಿಂಗರಂಗ ಅವರು ಹೇಳುವಂತೆ "ಸುಲಿದ ಬಾಳೆಯ ಹಣ್ಣಿನಂದದಿ, ಕಳೆದ ಸಿಗುರಿನ ಕಬ್ಬಿನಂದದಿ, ಅಳದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ", ಇದಷ್ಟು ಕನ್ನಡ ಭಾಷೆಯ ಲಲಿತತೆಯಾದರೆ, ಇನ್ನು ಕನ್ನಡ ನೆಲ ಶುದ್ಧ ಹಾಗು ಸ್ವಚ್ಛ. ಕರ್ನಾಟಕದಲ್ಲಿ ನಾವು ಕಾಡು, ನದಿಗಳ ಹರಿವು, ಸಸ್ಯಗಳ ಪ್ರಭೇದಗಳು ಸೇರಿದಂತೆ ಅನೇಕ ವನ್ಯಜೀವಿಗಳನ್ನು ಕಾಣಬಹುದು.

ಕನ್ನಡ ನಾಡಿನ ಮಣ್ಣಿನ ಸುಗಂಧ ಮತ್ತೆಲ್ಲೂ ದೊರಕದು. ಈ ಮಣ್ಣಿನಲ್ಲಿ ಬೆಳೆಯುವ ಬೆಳೆಯ ಸ್ವಾದ ಅಪರೂಪವಾದದ್ದು. ಈ ವಿಷಯದ ಕುರಿತು ಆಂಡಯ್ಯನವರು 13ನೇ ಶತಮಾನದಲ್ಲಿ ಕಾವ್ಯವನ್ನು ರಚಿಸಿದ್ದಾರೆ. "ಮಲ್ಲಿಗೆಯಲ್ಲದೆ, ಸಂಪಗೆಯಲ್ಲದೆ, ದಾಳಿಂಬಮಲ್ಲದೊಪ್ಪುವ ಚೆಂದೆಂಗಲ್ಲದೆ, ಮಾವಲ್ಲದೆ, ಕೌಂಗಲ್ಲದೆ, ಗಿಡಮರಗಳೆಂಬುವಿಲ್ಲಾ ನಾಡೊಳ್" ಎಂದು ತಿಳಿಸಿದ್ದಾರೆ.

ಕನ್ನಡ ನಾಡು ಇಷ್ಟೊಂದು ಸುಂದರವಾಗಿರುವಾಗ ಕನ್ನಡ ನಾಡಿನ ಜನರ ಮನಸ್ಸು ಅಷ್ಟೇ ಸುಂದರ ಹಾಗೂ ವಿಶಾಲವಾದದ್ದು. ಕನ್ನಡ ನಾಡಿನ ಜನರು ಬುದ್ಧಿವಂತರು ಹಾಗೂ ಚತುರರು. ನಮ್ಮ ಜನರಿಗೆ ವಿದ್ಯೆಯನ್ನು ಪಡೆಯದಿದ್ದರೂ ಮಹಾಕಾವ್ಯವನ್ನು ರಚಿಸುವ ಹಾಗೂ ಕಾರ್ಯಸಾಧನೆಯನ್ನು ಸಾಧಿಸುವ ಸಾಮರ್ಥ್ಯವಿದೆ. ಇವರು ಲೋಕಜ್ಞಾನ ಹಾಗು ತಿಳಿವಳಿಕೆಯನ್ನು ಹೆಚ್ಚಾಗಿ ಹೊಂದಿದ್ದಾರೆ. ಇಂತಹ ಪರಿಣತಿಯನ್ನು ಹೊಂದಿದವರು ನಮ್ಮ ಅತ್ಯಂತ ಅಮೂಲ್ಯವಾದ ನೆಲದಲ್ಲಿ ಆಶ್ರಯ ಪಡೆದಿದ್ದಾರೆ.

ಈ ವಿಷಯದ ಕುರಿತು 9ನೆ ಶತಮಾನದ ಕವಿ ಶ್ರೀವಿಜಯ "ಆ ನಾಡವರ್ಗಳ್ ಚದುರರ್ ನಿಜದಿಂ ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್" ಎಂದು ತಿಳಿಸಿದ್ದಾರೆ. ಪ್ರಾಚೀನ ಕಾಲದಿಂದಲೂ ಪ್ರಸ್ತುತ ಸಮಯದವರೆಗೂ ಕವಿಗಳು ಕನ್ನಡ ನಾಡು, ನುಡಿಯ ವೈಶಿಷ್ಟ್ಯತೆಯ ಬಗೆಗೆ ವರ್ಣಿಸುತ್ತಾ ಬಂದಿದ್ದಾರೆ. ನಮ್ಮ ಮಣ್ಣಿನಲ್ಲಿ ಮಣ್ಣಾಗಿರುವ ಅನೇಕ ದೇಹಗಳು ಬದುಕಿದ್ದಾಗ ವಿಭಿನ್ನವಾದ ಹಾಗೂ ಅವಿಸ್ಮರಣೀಯವಾದ ಸಾಧನೆಗಳನ್ನು ಮಾಡಿದ್ದಾರೆ. ಉದಾಹರಣೆಗೆ ಕನಕದಾಸರು, ಕುವೆಂಪುರವರು ಡಿ ವಿ ಗುಂಡಪ್ಪನವರು, ಪುರಂದರದಾಸರು, ಅಕ್ಕಮಹಾದೇವಿ ಮೊದಲಾದವರು.

ಇಂತಹ ಪವಿತ್ರ ನಾಡಿನಲ್ಲಿ ಹುಟ್ಟಿರುವ ನಾವುಗಳೇ ಅತ್ಯಂತ ಪುಣ್ಯಶಾಲಿಗಳು. ಆದುದರಿಂದ ತಮ್ಮ ಮಾತೃಭಾಷೆಯಾದ ಕನ್ನಡವನ್ನು ಉಳಿಸಲು ಮತ್ತು ಬೆಳೆಸಲು ನಮ್ಮಿಂದ ಆಗುವಂತಹ ಕಾರ್ಯಗಳಲ್ಲಿ ನಾವು ನಮ್ಮನ್ನು ತೊಡಗಿಸಿಕೊಂಡರೆ ನಮ್ಮ ನಾಡು, ನುಡಿ, ಸಂಸ್ಕೃತಿಯನ್ನು ನಾವು ನಮ್ಮ ಮುಂದಿನ ಜನಾಂಗಕ್ಕೂ ತಲುಪಿಸಬಹುದು. ನಾವು ನಮ್ಮ ಈ ಕನ್ನಡ ನಾಡಿಗೆ ಕೀರ್ತಿ ತಂದು ಕೊಡುವಂತಹ ಕೆಲಸಗಳನ್ನು ಹೆಚ್ಚಾಗಿ ಮಾಡಿದರೆ ನಾಡಿನ ಜನತೆಗೆ ಅತ್ಯಂತ ಉಪಕಾರ ಮಾಡಿದಂತಾಗುತ್ತದೆ.



ನಾವು ಮಾಡಿದ್ದನ್ನೇ ಹಾಗೂ ಪಾಲಿಸುವುದನ್ನೇ ನಮ್ಮ ಕಿರಿಯರು ಮಾಡುತ್ತಾರೆ ಹಾಗೂ ಪಾಲಿಸುತ್ತಾರೆ. ಆದುದರಿಂದ ನಾವು ಸಂಪೂರ್ಣವಾಗಿ ಒಳ್ಳೆಯ ಹಾಗೂ ಪರರಿಗೆ ಉಪಕಾರವಾಗುವಂತಹ ಕೆಲಸಗಳನ್ನು ಮಾಡಬೇಕು. ನಮಗೆ ದಿನನಿತ್ಯ ಅಗತ್ಯವಿರುವಂತಹ ಸಂಪನ್ಮೂಲಗಳನ್ನು ನೀಡುವ ಈ ನಾಡಿಗೆ ಎಂದೂ ದ್ರೋಹ ಮಾಡಬಾರದು. ಒಳ್ಳೆಯದನ್ನೇ ಕೇಳಿ ಒಳ್ಳೆಯದನ್ನೇ ಮಾತಾಡಬೇಕು.

ಹಂಸಲೇಖರವರು ಹೇಳಿದ ಹಾಗೆ "ಹುಟ್ಟಿದರೆ ಕನ್ನಡನಾಡಲ್ ಹುಟ್ಟಬೇಕು, ಮೆಟ್ಟಿದರೆ ಕನ್ನಡ ಮಣ್ಣ ಮೆಟ್ಟಬೇಕು". ಜೈ ಹಿಂದ್ ಜೈ ಕರ್ನಾಟಕ

**"ಎಲ್ಲೇ ಇರು, ಹೇಗೆ ಇರು ನೀ ಎಂದೆಂದಿಗೂ ಕನ್ನಡವಾಗಿರು."**

– ಜನನಿ ಎಸ್
9ನೆ ತರಗತಿ 'ಎ' ವಿಭಾಗ

## ನನ್ನ ಆದರ್ಶ ವ್ಯಕ್ತಿ

ಚಿಕ್ಕಂದಿನಿಂದಲೂ ಎತ್ತು, ಹಸು, ಕರು, ನಾಯಿ ಮುಂತಾದ ಪ್ರಾಣಿಗಳು ನನ್ನನ್ನು ಆಕರ್ಷಿಸುತ್ತಿವೆ. ಹಾಗಾಗಿ ಅವುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಗಾಗ ನನ್ನ ತಾತನವರಿಂದ ಕೇಳಿ ಪಡೆಯುತ್ತಿದ್ದೆ. ಇತ್ತೀಚಿನ ದಿನಗಳಲ್ಲಿ ಯೂಟ್ಯೂಬ್ ಮುಖಾಂತರ ಹಳ್ಳಿಕಾರ್ ತಳಿಯ ಎತ್ತುಗಳು ರೈತರಲ್ಲಿ ಪ್ರಚಲಿತದಲ್ಲಿರುವುದನ್ನು ತಿಳಿದೆ. ನಾನೂ ಸಹ ಇದರ ಬಗ್ಗೆ ತಿಳಿದುಕೊಳ್ಳಲು ಹಂಬಲಿಸಿದಾಗ ನನಗೆ ಪರಿಚಯವಾದ ವ್ಯಕ್ತಿ ಶ್ರೀ ವರ್ತೂರ್ ಸಂತೋಷ್. ಇವರು ಹಳ್ಳಿಕಾರ್ ತಳಿಯನ್ನು ಉಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದಾರೆ. ಇವರ ಮಾತಿನ ಮತ್ತು ಕೃತಿಯ ಪ್ರಭಾವದಿಂದಾಗಿ ನನ್ನ ಆದರ್ಶ ವ್ಯಕ್ತಿಯಾಗಿದ್ದಾರೆ.

ಅವರು ಕೋಲಾರ ಜಿಲ್ಲೆಯ ವರ್ತೂರು ಎಂಬ ಊರಿನಲ್ಲಿ ಮಾರ್ಚ್ 12, 1994ರಂದು ಜನ್ಮತಾಳಿದರು. ಇವರ ತಂದೆ ಸಂಪತ್ ಕುಮಾರ್ ಹಾಗೂ ತಾಯಿ ಮಂಜುಳ. ಚಿಕ್ಕ ಮಕ್ಕಳು ದಿಪಾದಿ(ವಾಕರ್)ಹಿಡಿದು ನಡೆಯುವುದನ್ನು ಕಲಿತರೆ ಇವರು ಎತ್ತಿನ ಮೂಗುದಾರ ಹಿಡಿದು ನಡೆಯುವುದನ್ನು ಕಲಿತರು. ತಲಾತಲಾಂತರದಿಂದ ಮನೆಯಲ್ಲಿ ಹಸು, ಎತ್ತು ಸಾಕುತ್ತಿದ್ದ ಮನೆತನದಿಂದ ಬಂದ ಇವರಿಗೆ ಸಹಜವಾಗಿಯೇ ಅವುಗಳಲ್ಲಿ ಅತಿಯಾದ ಆಸಕ್ತಿ. ಹಾಗಿದ್ದರೂ ಎಂಬಿಎ ಪದವೀಧರರಾಗಿದ್ದಾರೆ.



'ಹಳ್ಳಿಕಾರ್' ತಳಿಯನ್ನು ಹಲವಾರು ರೈತರು ಸಾಕುವ ಹಾಗೆ ಮಾಡಿ ಇದರ ಉಪಯೋಗಗಳನ್ನು ಯೂಟ್ಯೂಬ್ ಮುಖಾಂತರ ಜನಸಾಮಾನ್ಯರಲ್ಲೂ ಅಭಿರುಚಿ ಮೂಡುವಂತೆ ಮಾಡಿದ್ದಾರೆ. ನಾನು ಸಹ ಇವರಿಂದ ಪ್ರೇರಿತನಾಗಿ ನನ್ನ ತೋಟದಲ್ಲಿ ಹಳ್ಳಿಕಾರ್ ಉತ್ತಮ ತಳಿಯ ಎತ್ತು, ಹಸು, ಕರುಗಳನ್ನು ಸಾಕುತ್ತಿದ್ದೇನೆ. ನನ್ನನ್ನು ಪ್ರೇರೇಪಿಸಿದ ಇವರಿಗೆ ಅನಂತ ಧನ್ಯವಾದಗಳು.

– ಅಬಿತ್ ವಿ
8ನೆ ತರಗತಿ 'ಇ' ವಿಭಾಗ

## ನನ್ನ ಮೆಚ್ಚಿನ ಗುರುಗಳು

ಗುರು ಎಂದರೆ ವ್ಯಕ್ತಿಯಲ್ಲ ಒಂದು ಶಕ್ತಿ. ಅಜ್ಞಾನದ ಕತ್ತಲೆಯ ಕಳೆದು ಸುಜ್ಞಾನದ ಬೆಳಕಿಗೆ ಕರೆದುಕೊಂಡುಹೋಗುವ ಶಬ್ಧವೇ 'ಗುರು' ಎಂಬ ಮಾತಿನಂತೆ ಗುರುಗಳು ನಮ್ಮ ಜೀವನದ ಅತ್ಯಮೂಲ್ಯ ವ್ಯಕ್ತಿಗಳಾಗಿರುವರು. ನಮ್ಮ ವ್ಯಕ್ತಿತ್ವವನ್ನು ರೂಪಿಸಿ ನಮ್ಮ ದೇಶದ ಸತ್ಪ್ರಜೆಯನ್ನಾಗಿ ಮಾಡಲು ಗುರುಗಳ ಕಾಣಿಕೆ ಬಹಳ ಮಹತ್ವದ್ದಾಗಿರುತ್ತದೆ. ಉದಾಹರಣೆಗೆ ನಮ್ಮ ಬಾಲ್ಯವನ್ನು ಸರಿಯಾದ ರೀತಿಯಲ್ಲಿ ರೂಪಿಸಿದಂತಹ ಗುರುಗಳು, ನಂತರ ನಮ್ಮ ಇತರ ಚಟುವಟಿಕೆಗಳಾದ ಚಿತ್ರಕಲೆ, ಸಂಗೀತ, ವೇದಾಭ್ಯಾಸ, ಕ್ರೀಡೆ ಮತ್ತು ಇತರ ಉತ್ತಮ ಅಭ್ಯಾಸಗಳನ್ನು ಕಲಿಸಿಕೊಟ್ಟಂತಹ ಗುರುಗಳು, ಶಾಲೆಯಲ್ಲಿ ಅನೇಕ ಪಾಠ-ಪ್ರವಚನಗಳನ್ನು ಕಲಿಸಿಕೊಟ್ಟಂತಹ ಗುರುಗಳು, ನಮ್ಮ ಜೀವನದ ಬುನಾದಿಯನ್ನು ಉತ್ತಮ ರೀತಿಯಲ್ಲಿ ರೂಪಿಸಿದಂತಹ ನಮ್ಮ ಪೋಷಕರು, ಮೇಲೆ ತಿಳಿಸಿದ ಈ ಎಲ್ಲಾ ಗುರುಗಳ ಪಾತ್ರಗಳಲ್ಲಿ ನನ್ನ ನೆಚ್ಚಿನ ಗುರುಗಳು ನನಗೆ ವೇದಾಭ್ಯಾಸ ಕಲಿಸಿದಂತಹ ಗುರುಗಳು.



ನನಗೆ ವೇದಾಭ್ಯಾಸ ಹೇಳಿಕೊಟ್ಟ ಗುರುಗಳ ಹೆಸರು ಕಶ್ಯಪ ಗುರುಗಳು. ಅವರು ನನಗೆ ಹಲವಾರು ಸೂಕ್ತಗಳು ಹಾಗೂ ಮಂತ್ರಗಳನ್ನು ಕಲಿಸಿದ್ದಾರೆ. ಉದಾಹರಣೆಗೆ: ದೇವಿ ಸೂಕ್ತ, ಶ್ರದ್ಧಾ ಸೂಕ್ತ, ನಿರಾಜನ ಮಂತ್ರ, ಗಣೇಶ ಅಥರ್ವಶೀರ್ಷ, ಪುರುಷ ಸೂಕ್ತ ಹಾಗೂ ಮಂತ್ರ ಪುಷ್ಪ. ನನಗೆ ಬಾಲ್ಯದಿಂದಲೇ ವೇದ ಪಠನೆ ಕಲಿಯಬೇಕೆಂಬ ಆಸೆಯಿತ್ತು. ಅವರು ನನ್ನ ಕನಸನ್ನು ನನಸು ಮಾಡಿದರು. ಇಪ್ಪತ್ತೆರಡು ದಿನಗಳ ಕಠಿಣ ಪಾಠವನ್ನು ನಾನು ಮತ್ತು ನನ್ನ ಸಹಪಾಠಿಗಳು ಯಶಸ್ವಿಯಾಗಿ ಮುಗಿಸಿ ಉತ್ತಮ ವಿದ್ಯೆಯನ್ನು ಕಲಿತೆವು. ನಮ್ಮ ಗುರುಗಳು ಪ್ರತಿನಿತ್ಯ ನಮ್ಮ ತಪ್ಪನ್ನು ಸರಿಯಾದ ರೀತಿಯಲ್ಲಿ ತಿದ್ದಿ ಅನೇಕ ವಿಚಾರಗಳನ್ನು ತಿಳಿಸಿಕೊಟ್ಟರು.

ಸುಭಾಷಿತಗಳು, ಪುರಾಣ ಕತೆಗಳು, ವೇದಸ್ವರಗಳನ್ನೆಲ್ಲ ಪ್ರತಿನಿತ್ಯ ಕಲಿಸುತ್ತಿದ್ದರು. ಭಜನೆ ಹಾಗೂ ಪ್ರವಚನಗಳನ್ನು ಅದ್ಭುತವಾಗಿ ಹೇಳಿಕೊಟ್ಟರು. ಕಲಿಕೆಯ ಮಧ್ಯ ಕೆಲವು ಹಾಸ್ಯಗಳನ್ನು ಮಾಡಿ ಕಲಿಕೆಯನ್ನು ಒಳ್ಳೆಯ ರೀತಿಯಲ್ಲಿ ನಡೆಸಿಕೊಂಡು ಹೋದರು. ನಾವು ಗುರುಗಳನ್ನು ಗೌರವಿಸುವುದು ಬಹಳ ಮುಖ್ಯ, ಯಾವುದೇ ರೀತಿಯ ಗುರುವಾಗಲೀ ಅವರಿಗೆ ನಾವು ಕೊಡುವ ಗುರುದಕ್ಷಿಣೆ 'ಗೌರವ'.



– ಸಿ ಎನ್ ಪ್ರಣವ್
7ನೆ ತರಗತಿ 'ಬಿ' ವಿಭಾಗ

## ನನ್ನ ಅಮ್ಮ



ಗುರುಗಳೆಂದರೆ ಕೇವಲ ಶಿಕ್ಷಕರಷ್ಟೇ ಅಲ್ಲ, ಜೀವನದಲ್ಲಿ ಸರಿಯಾದ ದಾರಿ ತೋರುವ ಪ್ರತಿಯೊಬ್ಬರೂ ಗುರುಗಳೆ. ಗುರುಗಳಿಗೆ ಮತ್ತು ಎಲ್ಲ ಶಿಕ್ಷಕರಿಗೆ ಗೌರವ ಸೂಚಕವಾಗಿ ನಾವು ಗುರು ಪೂರ್ಣಿಮವನ್ನು ಆಚರಿಸುತ್ತೇವೆ. ನಾವು ಅನೇಕ ಜನರನ್ನು ಗುರುಗಳಾಗಿ ಭೇಟಿಯಾಗುತ್ತೇವೆ. ಆದರೆ ಪ್ರತಿಯೊಬ್ಬರಿಗೂ ಒಬ್ಬ ನೆಚ್ಚಿನ ಗುರುಗಳಿರುತ್ತಾರೆ. ಅದೇ ರೀತಿ ನನಗೂ ಕೂಡ ಒಬ್ಬ ನೆಚ್ಚಿನ ಗುರು ಇದ್ದಾರೆ.

ನನ್ನ ನೆಚ್ಚಿನ ಗುರು ನನ್ನ ಅಮ್ಮ. ಅವಳು ನಾನು ಹುಟ್ಟಿದ ದಿನದಿಂದ ನನಗೆ ನಡೆಯುವುದು, ಮಾತನಾಡುವುದು, ನನ್ನ ಕೈಯಿಂದ ನಾನೇ ತಿನ್ನುವುದು, ಓದುವುದು, ಓಡುವುದು ಹೀಗೆ ಹಲವಾರು ಕಲಿಕೆಯನ್ನು ಕಲಿಸಿದ್ದಾಳೆ. ದೊಡ್ಡವರಿಗೆ ಗೌರವ ನೀಡುವುದು, ಶಿಸ್ತಿನಿಂದ ವರ್ತಿಸುವುದು, ಜವಾಬ್ದಾರಿಯಿಂದ ನಡೆದುಕೊಳ್ಳುವುದು ಮುಂತಾದ ಉತ್ತಮ ಮೌಲ್ಯಗಳನ್ನು ಕಲಿಸಿದ್ದಾಳೆ. ಬೇರೆಯವರನ್ನು ಕೀಳಾಗಿ ನೋಡಬಾರದು, ಯಾವಾಗಲೂ ನಮ್ಮ ಬಗ್ಗೆ ನಾವೇ ಮಾತನಾಡಬಾರದು, ಮುಂದೆ ಇರುವ ವ್ಯಕ್ತಿಯ ಪರಿಸ್ಥಿತಿ ನೋಡಿ ಮಾತನಾಡಬೇಕು, ಸುಳ್ಳು ಹೇಳಬಾರದೆಂದು ಅನೇಕ ಬಾರಿ ನನಗೆ ಹೇಳುತ್ತಿರುತ್ತಾಳೆ. ನಾನು ತಪ್ಪು ಮಾಡಿದಾಗ ನನಗೆ ಬೈದು ಅಥವಾ ತಿಳಿಹೇಳಿ ನನಗೆ ಸರಿಯಾದ ಮಾರ್ಗವನ್ನು ಸೂಚಿಸುತ್ತಾಳೆ. ನನ್ನ ಅಮ್ಮ ಕೆಲಸಕ್ಕಾಗಿ ಹೊರಗಡೆ ಹೋದಾಗ ನನ್ನ ಅಜ್ಜಿ ಅಮ್ಮನ ಸ್ಥಾನವನ್ನು ತುಂಬುತ್ತಾಳೆ. ಅನೇಕಬಾರಿ ನನ್ನ ಅಜ್ಜಿ ನನಗೆ ಗುರು ಆಗಿದ್ದಾರೆ. ಹೀಗಾಗಿ ನನ್ನ ನೆಚ್ಚಿನ ಗುರುಗಳು ನನ್ನ ಅಜ್ಜಿ ಮತ್ತು ಅಮ್ಮ.

ನನ್ನ ಶಿಕ್ಷಕರು ನನಗೆ ಶಿಸ್ತಿನಿಂದ ವರ್ತಿಸುವುದರ ಬಗ್ಗೆ, ಪಾಠದ ಬಗ್ಗೆ, ಉತ್ತಮ ಮೌಲ್ಯಗಳ ಬಗ್ಗೆ ನನಗೆ ಹೇಳಿಕೊಟ್ಟಿದ್ದಾರೆ. ನನ್ನ ಗೆಳತಿಯರು ನನಗೆ ಹಲವಾರು ವಿಷಯಗಳನ್ನು ಕಲಿಸಿಕೊಟ್ಟಿದ್ದಾರೆ. ನನ್ನ ಪರಿವಾರ ನನ್ನ ಅಕ್ಕ, ಅಣ್ಣ, ಅಜ್ಜ, ಚಿಕ್ಕಮ್ಮ, ದೊಡ್ಡಮ್ಮ ಎಲ್ಲರೂ ನನಗೆ ಏನಾದರೂ ಒಂದು ಪಾಠ ಕಲಿಸಿಕೊಟ್ಟಿದ್ದಾರೆ. ನಾನು ನನ್ನ ಜೀವನದ ಎಲ್ಲ ಗುರುಗಳಿಗೆ ನನ್ನ ಹೃದಯಪೂರ್ವಕವಾದ ಧನ್ಯವಾದಗಳನ್ನು ಹೇಳಲು ಬಯಸುತ್ತೇನೆ.



– ಶ್ರಾವಣಿ ಎಸ್ ಕೆ
7ನೆ ತರಗತಿ 'ಬಿ' ವಿಭಾಗ

## ಊರಿನ ರಕ್ಷಕ

ಒಂದು ಊರಿನಲ್ಲಿ ಒಬ್ಬಳು ಅಜ್ಜಿ ಮತ್ತು ಅವಳ ಮೊಮ್ಮಗ ವಾಸಿಸುತ್ತಿದ್ದರು. ಆ ಊರಿನ ಪಕ್ಕವೇ ಒಂದು ದಟ್ಟವಾದ ಕಾಡಿತ್ತು. ಎಲ್ಲರಿಗೂ ಆ ಕಾಡಿನ ಒಳಗೆ ಹೋಗಲು ತುಂಬಾ ಭಯ. ಏಕೆಂದರೆ ಅಲ್ಲಿ ತುಂಬಾ ಕಾಡುಪ್ರಾಣಿಗಳಿದ್ದವು. ಅವರು ಕಾಡಿನಿಂದ ಸೌದೆ ತರಬೇಕಾದಾಗ, ಅಜ್ಜಿಯ ಮೊಮ್ಮಗನನ್ನು ಸಹಾಯಕ್ಕೆ ಕರೆಯುತ್ತಿದ್ದರು. ಅವನ ಹೆಸರು 'ವೀರ.' ಊರಿನ ಜನರು ಅವನನ್ನು ಕಂಡ ಕೂಡಲೆ ಹೆಸರಿಗೆ ತಕ್ಕಂತೆ ಯಾವುದಕ್ಕೂ ಭಯಪಡುವುದಿಲ್ಲ ಎನ್ನುತ್ತಿದ್ದರು. ಅವನು ಕಾಡಿನ ಒಳಗೆ ಹೋಗಿ ಸೌದೆ, ಹಣ್ಣು-ಹಂಪಲುಗಳನ್ನು ತರುತ್ತಿದ್ದನು. ಅವನು ಯಾರಿಗೂ ಸಹಾಯ ಮಾಡುವುದಿಲ್ಲ ಎಂದು ಹೇಳುತ್ತಿರಲಿಲ್ಲ. ಆದ್ದರಿಂದ ಜನರೆಲ್ಲ ಅವನಿಗೆ 'ಊರಿನ ರಕ್ಷಕ' ಎಂಬ ಬಿರುದನ್ನು ಕೊಟ್ಟರು.



–ಜಾನ್ಹವಿ ಜೆ ಗೋರೆ
6ನೆ ತರಗತಿ 'ಎಫ್' ವಿಭಾಗ


## ಗೆಳೆತನದ ಮಹತ್ವ

'ಗೆಳೆತನ' ಇದೊಂದು ಸುಂದರವಾದ ಸಂಬಂಧ. ನಿಜವಾದ ಗೆಳೆತನವೆಂದರೆ ಯಾವುದೇ ಜಾತಿ, ಲಿಂಗ ಭೇದಭಾವಗಳನ್ನು ನೋಡದೆ ಹುಟ್ಟುವ ಒಂದು ಮಧುರವಾದ ಸಂಬಂಧ. ಈ ಸಂಬಂಧವು ನಮ್ಮ ಬುದ್ಧಿಯನ್ನು ಹೆಚ್ಚಿಸುವ ಒಂದು ಸೇತುವೆ ಕೂಡ ಆಗಬಹುದು. ಉದಾಹರಣೆಗೆ ಒಬ್ಬಳು ಹುಡುಗಿ ಓದಿನಲ್ಲಿ ತುಂಬಾ ಕಷ್ಟಪಡುತ್ತಿದ್ದಾಳೆ, ಆ ಸಂದರ್ಭದಲ್ಲಿ ಅವಳ ಗೆಳತಿ ಅವಳಿಗೆ ಸಹಾಯಮಾಡಿ ಅವಳಿಗೆ ನೆರವಾಗಬಹುದು. ಗೆಳೆತನ ಒಳಿತು ಕೆಡುಕು ಎರಡೂ ಪರಿಣಾಮಗಳನ್ನು ಬೀರಬಹುದು.

ಗೆಳೆತನದ ಒಳ್ಳೆಯ ವಿಷಯಗಳೆಂದರೆ ನಮಗೆ ದುಃಖವಾದಾಗ ನಾವು ಅದನ್ನು ನಮ್ಮ ಗೆಳೆಯರ ಜೊತೆ ಹಂಚಿಕೊಳ್ಳಬಹುದು. ಅದರಿಂದ ನಮ್ಮ ಮನಸ್ಸಿನಲ್ಲಿರುವ ಭಾರ ಇಳಿಯುತ್ತದೆ. ನಾವು ಕಷ್ಟದಲ್ಲಿದ್ದಾಗ ನಮ್ಮ ಗೆಳೆಯರು ಸಹಾಯ ಮಾಡುತ್ತಾರೆ. ನಾವು ಶಾಲೆಯಲ್ಲಿರುವಾಗ ನಮಗೆ ಏನಾದರೂ ಗಾಯವಾದಾಗ ಅಲ್ಲಿ ನಮ್ಮ ಅಮ್ಮಂದಿರು ಆರೈಕೆ ಮಾಡುವುದಕ್ಕೆ ಇರುವುದಿಲ್ಲ. ಆ ಸಮಯದಲ್ಲಿ ನಮ್ಮ ಗೆಳೆಯರೇ ನಮಗೆ ಸಹಾಯ ಮಾಡಲು ಮುಂದಾಗುತ್ತಾರೆ.

ಗೆಳೆತನ ನಮ್ಮ ಮೇಲೆ ಕೆಟ್ಟ ಪ್ರಭಾವ ಕೂಡ ಬೀರಬಹುದು. ನಮ್ಮ ಗೆಳೆಯರಿಗೋಸ್ಕರ ಕೆಲವೊಮ್ಮೆ ನಾವು ತಪ್ಪು ಕೆಲಸಗಳನ್ನು ಮಾಡಿಬಿಡುತ್ತೇವೆ. ನಾವು ಯಾವುದೇ ತಪ್ಪು ಮಾಡದಿದ್ದರೂ ನಮ್ಮ ಸ್ನೇಹಿತರಿಗೋಸ್ಕರ ಅದನ್ನು ಒಪ್ಪಿಕೊಳ್ಳುತ್ತೇವೆ. ಹೀಗೆ ತುಂಬಾ ವಿಷಯಗಳಲ್ಲಿ ನಮ್ಮ ಸ್ನೇಹಿತರ ಪರ ನಿಲ್ಲುತ್ತೇವೆ.

ಗೆಳೆತನ ಮಾಡುವಾಗ ಅದು ನಮ್ಮ ಮೇಲೆ ಒಳ್ಳೆಯ ಪರಿಣಾಮವನ್ನುಂಟು ಮಾಡುತ್ತದೆಯೋ ಅಥವಾ ಕೆಟ್ಟ ಪ್ರಭಾವ ಬೀರುತ್ತದೋ ಎಂದು ತಿಳಿಯದೆ ಮಾಡುವ ಒಂದು ಅಮರ ಸಂಬಂಧ. ನಾವು ಗೆಳೆತನವನ್ನು ಮಾಡಿದ ಮೇಲೆ ಅದು ಸರಿನಾ? ಅಥವಾ ತಪ್ಪಾ? ಎಂದು ಅರಿತುಕೊಂಡು ಮಾಡುವುದಲ್ಲ, ಇದೇ ಗೆಳೆತನದ ಮಹತ್ವ.





– ಆರ್ ಮಾಧುರಿ
7ನೆ ತರಗತಿ 'ಡಿ' ವಿಭಾಗ

## ಮಹತ್ವಪೂರ್ಣ ಸಂಬಂಧ




ಗೆಳೆತನ ನಮ್ಮ ಜೀವನದ ಅತೀ ಮುಖ್ಯವಾದ ಭಾಗವಾಗಿದೆ. ಇದು ಒಂದು ಪವಿತ್ರವಾದ ಸಂಬಂಧ. ಮನುಷ್ಯರು ಮಾಡಿಕೊಳ್ಳುವ ಈ ಸಂಬಂಧ ಬಹಳ ಮಹತ್ವಪೂರ್ಣವಾಗಿದೆ. ಏಕೆಂದರೆ ಇದರಿಂದ ನಾವು ಪ್ರೀತಿ ಮತ್ತು ಪವಿತ್ರತೆಯನ್ನು ಕಲಿಯಬಹುದು. ಹೇಗೆಂದರೆ ಗೆಳೆತನದಲ್ಲಿ ಮನುಷ್ಯರನ್ನು ನಮ್ಮವರೆಂದು ಭಾವಿಸುತ್ತೇವೆ. ಅವರಿಗೇನಾದರೂ ಸುಖ-ದುಃಖ ಬಂದರೆ ಅದನ್ನು ಗೆಳೆಯರ ಜೊತೆ ಹಂಚಿಕೊಳ್ಳುತ್ತಾರೆ. ಅವರಿಗೆ ನೋವಾದರೆ ನಮಗೇ ಅವರಿಗಿಂತ ಹೆಚ್ಚು ನೋವಾಗುತ್ತದೆ. ಹೀಗಾಗುವುದೇಕೆಂದರೆ ನಾವು ಅವರನ್ನು ನಮ್ಮ ಪ್ರಿಯ ವ್ಯಕ್ತಿಯನ್ನಾಗಿ ಮಾಡಿಕೊಳ್ಳುತ್ತೇವೆ. ಅವರನ್ನು ಕಳೆದುಕೊಳ್ಳುವ ಭಯ ಮೂಡುತ್ತದೆ. ಹೀಗೆ ನಾವು ಗೆಳೆತನದ ಮೂಲಕ ಪ್ರೀತಿಯ ನಿಜವಾದ ಅರ್ಥವನ್ನು ಕಲಿಯುತ್ತೇವೆ.

ಗೆಳೆತನದಿಂದ ನಮಗೆ ನಮ್ಮ ತಪ್ಪುಗಳು ಅರಿವಾಗುವ ಸಾಧ್ಯತೆ ಇರುತ್ತದೆ. ಗೆಳೆಯರ ಜೊತೆ ಮಾತನಾಡುವಾಗ, ಕಾಲಕಳೆಯುವಾಗ ಅವರ ಮೇಲೆ ಸಿಟ್ಟುಮಾಡಿಕೊಳ್ಳಬಹುದು. ಅವರಿಗಾಗುವ ನೋವಿಂದ ನಮ್ಮ ತಪ್ಪು ಅರಿವಾಗುತ್ತದೆ. ಗೆಳೆಯರ ಜೊತೆ ನಮ್ಮ ದುಃಖಗಳನ್ನು ಹೇಳಿಕೊಂಡು ಮನಸ್ಸನ್ನು ಹಗುರ ಮಾಡಿಕೊಳ್ಳಬಹುದು. ಒಂದೊಂದು ಬಾರಿ ನಮ್ಮ ಕುಟುಂಬದವರ ಜೊತೆ ಕಷ್ಟಗಳನ್ನು ಹಂಚಿಕೊಳ್ಳಲು ಆಗುವುದಿಲ್ಲ. ಆಗ ನಮ್ಮ ಗೆಳೆಯರ ಹತ್ತಿರ ಹೇಳಿಕೊಂಡು ಮನಸ್ಸನ್ನು ಹಗುರ ಮಾಡಿಕೊಳ್ಳಬಹುದು. ಈ ಸಂಬಂಧ ಎಷ್ಟು ಗಟ್ಟಿಯಾಗಿರುತ್ತದೆ ಎಂದರೆ ನಮ್ಮ ಗೆಳೆಯರು ನಮ್ಮಿಂದ ದೂರವಾದಾಗಲೂ ಅವರ ಮೇಲೆ ಅಷ್ಟೇ ಪ್ರೀತಿ ಗೌರವ ಇರುತ್ತದೆ. ಅಂಥಹ ಗೆಳೆಯರನ್ನು ಪಡೆಯಬೇಕೆಂದರೆ ನಮ್ಮಲ್ಲಿ ಒಳ್ಳೆಯ ಗುಣಗಳಿರಬೇಕು.



–ಅಶ್ರಿತ್ ಎ ಎ
7ನೆ ತರಗತಿ 'ಎಫ್' ವಿಭಾಗ

## ಕಾಡಿನಲ್ಲೊಂದು ದಿನ



ಒಂದು ದಿನ ನಾನು ಹಣ್ಣುಗಳನ್ನು ತರಲು ಕಾಡಿಗೆ ಹೋಗಿದ್ದೆನು. ಆಗ ನಾನು ಗೊತ್ತಿಲ್ಲದೆ ದಾರಿತಪ್ಪಿದೆ. ಅಲ್ಲಿ ನನಗೆ ಪೊದೆಯ ಬಳಿ ಒಂದು ಮನೆ ಕಾಣಿಸಿತು. ಆ ಮನೆಯಲ್ಲಿ ಯಾರಿರಬಹುದೆಂಬ ಕುತೂಹಲ ನನಗೆ. ಬಾಗಿಲು ತೆಗೆದ ತಕ್ಷಣ ಕಣ್ಣ ಮುಂದೆಯೇ ಸುಮಾರು ಪಕ್ಷಿಗಳು ಹಾರಿಹೋದವು. ಆ ಮನೆಯು ಒಳಗಿನಿಂದ ನೋಡುವುದಕ್ಕೆ ತುಂಬಾ ಭಯಂಕರವಾಗಿತ್ತು. ಆ ಮನೆಯಲ್ಲಿ ಒಬ್ಬರು ವಯಸ್ಸಾದ ಅಜ್ಜಿ ವಾಸಮಾಡುತ್ತಿದ್ದರು. ಅವರಿಗೆ ಸಹಾಯಮಾಡಲು ಒಬ್ಬ ಹುಡುಗನು ಜೊತೆಯಲ್ಲಿದ್ದನು. ಅವರಿಬ್ಬರೂ ನನ್ನನ್ನು ಸಂತೋಷದಿಂದ ಸ್ವಾಗತಿಸಿದರು. ಆ ದಿನ ನಾನು ಅಲ್ಲಿಯೇ ಉಳಿದುಕೊಂಡೆ. ಆ ರಾತ್ರಿ ಪ್ರಾಣಿಗಳು ಭಯಂಕರವಾಗಿ ಕೂಗುತ್ತಾ ಮನೆಯೊಳಗೆ ನುಗ್ಗಿದವು. ನಾವೆಲ್ಲರು ಜೋರಾಗಿ ಕಿರುಚಾಡಿದೆವು. ನನಗಂತೂ ತುಂಬಾ ಭಯವಾಯಿತು. ಕೂಡಲೇ ಹುಡುಗನು ಮೊದಲೇ ಸಿದ್ಧಪಡಿಸಿಕೊಂಡಿದ್ದ ಕಡ್ಡಿಗೆ ಬೆಂಕಿ ಹಚ್ಚಿ ಪ್ರಾಣಿಗಳಿಗೆ ಹೆದರಿಸಿ ಓಡಿಸಿದನು. ನಂತರ ಎಲ್ಲರೂ ನೆಮ್ಮದಿಯಿಂದ ನಿದ್ರಿಸಿದೆವು.




–ನಮ್ರತಾ ವಿ
6ನೆ ತರಗತಿ 'ಬಿ' ವಿಭಾಗ

## ಮೋಸಗಾರ ನರಿ

ಒಂದು ದಟ್ಟವಾದ ಕಾಡಿನಲ್ಲಿ ಪ್ರಾಣಿಗಳು ವಾಸವಾಗಿದ್ದವು. ಅಲ್ಲಿ ಒಂದು ನರಿಯಿತ್ತು. ಒಮ್ಮೆ ಅದಕ್ಕೆ ತುಂಬಾ ಬಾಯಾರಿಕೆ ಆಯಿತು. ನರಿಗೆ ಬಾವಿಯಲ್ಲಿ ನೀರು ನೋಡಿ, ಬಾಯಾರಿಕೆ ತಡೆಯಲಾರದೆ ನೀರು ಕುಡಿಯಲು ಮುಂದಾಯಿತು. ಆದರೆ ಬಾವಿಯೊಳಗೆ ಬಿದ್ದ ನರಿ ಹೊರಗೆ ಬರಲು ಪ್ರಯತ್ನಿಸಿತು. ಬಾವಿಯಿಂದ ಹೊರಗೆ ಬರಲು ಸಾಧ್ಯವಾಗದೆ ಅದು ಕಾಪಾಡಿ, ಕಾಪಾಡಿ ಎಂದು ಕೂಗುತಿತ್ತು.

ನರಿಯ ಕೂಗನ್ನು ಕೇಳಿಸಿಕೊಂಡ ಮೇಕೆಯು ಓಡಿಬಂದಿತು. ನರಿಯ ಬುದ್ಧಿಯನ್ನು ತಿಳಿದಿದ್ದ ಮೇಕೆಯು ನರಿಯನ್ನು ನೋಡಿ "ನಾನು ನಿನ್ನನ್ನು ಕಾಪಾಡಿದ ಮೇಲೆ ನೀನು ನನ್ನನ್ನು ತಿನ್ನಬಾರದು" ಎಂಬ ಷರತ್ತು ಹಾಕಿತು. ನರಿಯು "ಆಯಿತು" ಎಂದು ಒಪ್ಪಿಕೊಂಡಿತು. ಮೇಕೆಯು ನರಿಯ ಮಾತನ್ನು ನಂಬಿ, ಅದನ್ನು ಕಾಪಾಡಲು ಹತ್ತಿರದಲ್ಲಿದ್ದ ಒಂದು ಹಗ್ಗವನ್ನು ತೆಗೆದುಕೊಂಡು ಬಂದಿತು. ಮೇಕೆಯು ಬಹಳ ಶ್ರಮಪಟ್ಟು, ಆಯಾಸಗೊಂಡು ನರಿಯನ್ನು ಹೊರಗಡೆ ಎಳೆದುತಂದಿತು. ಆದರೆ ನರಿಯು ಮೋಸಮಾಡಿ ಮೇಕೆಯನ್ನು ತಿಂದು ಮುಗಿಸಿತು.



– ನವಿಕಾ, ಶ್ರೀಯಾ, ದುವನ್, ಪ್ರಣವ್, ಸೌಜನ್ಯ
6ನೆ ತರಗತಿ 'ಜಿ' ವಿಭಾಗ

## ನನ್ನೂರು

ಅಂದ ಚೆಂದದ ಊರು ನಮ್ಮ ಮೈಸೂರು
ವೀಕ್ಷಿಸಲು ಸ್ಥಳಗಳಿವೆ ಹಲವಾರು

ಕಂಪಸೂಸುವ ಮೈಸೂರು ಮಲ್ಲಿಗೆ
ಅರಮನೆ ನೋಡದೆ ಹೋಗುವಿರಿ ಎಲ್ಲಿಗೆ?

ಪಡೆಯಲೇಬೇಕು ಎಲ್ಲರು ಚಾಮುಂಡಿಯ ದರ್ಶನ
ನೋಡಲು ಎರಡು ಕಣ್ಣು ಸಾಲದು ಬೃಂದಾವನ

ಆಸ್ವಾದಿಸಲು ರುಚಿಯಾದ ಮೈಸೂರುಪಾಕು
ಮನಮೋಹಕವಾದ ಶಿಂಷಾ ನೋಡಲೇಬೇಕು

ಜಗತ್ ವಿಖ್ಯಾತಿ ಮೈಸೂರು ದಸರ
ಕಲಾತ್ಮಕವಾದ ಊರು ಸೋಮನಾಥಪುರ

ಶಾಂತಿ ಪ್ರೀತಿಗೆ ಹೆಸರಾದ ಊರು
ಸದಾ ಹಸಿರಾಗಿರಲಿ ನಮ್ಮೂರು ಮೈಸೂರು



– ಆಕಾಂಕ್ಷ ಟಿ
೯ನೆ ತರಗತಿ 'ಬಿ' ವಿಭಾಗ

## ಕನ್ನಡಾಂಬೆ!

ಓ ತಾಯೆ, ಕನ್ನಡಾಂಬೆ
ನಮ್ಮನ್ನು ರಕ್ಷಿಸುವ ಓ ಅಂಬೆ!
ಗಿಡ, ಮರ, ಬಳ್ಳಿ ನಿನ್ನ ಆಭರಣ
ಅದೇ ನಮ್ಮಯ ಬಾಳಿನ ಹೊಂಗಿರಣ!

ನಿನ್ನ ಪ್ರೀತಿಗೆ ಇಲ್ಲ ಮಿತಿ
ಕನ್ನಡವೇ ನಮಗೀಗ ಗತಿ!
ಕನ್ನಡ ಭಾಷೆಯೇ ನಮಗೆ ಅಮೃತ
ಕನ್ನಡಕ್ಕಾಗಿಯೇ ನಮ್ಮ ಮತ!

ನಿನ್ನ ಪ್ರೀತಿಗೆ ಪಾತ್ರರಾದ ನಾವು
ನಿನಗಾಗಿ ಹೋರಾಡುವೆವು ಬರುವವರೆಗೂ ಸಾವು
ನಿನ್ನನ್ನು ಕಾಪಾಡುವುದು ನಮ್ಮ ಕರ್ತವ್ಯ
ಅದಕ್ಕಾಗಿ ಬರೆಯುತ್ತಿರುವೆ ಈ ಕಾವ್ಯ!

– ತನ್ವಿ ಗಿರೀಶ್
೯ನೆ ತರಗತಿ 'ಇ' ವಿಭಾಗ




## ಮುಸ್ಸಂಜೆ ಮಡಿಲಲಿ

ಮುಸ್ಸಂಜೆ ಮಡಿಲಲಿ
ಮುಂಗಾರ ಮಳೆಯಲಿ
ಮನವೊಂದು ಹಾಡ ಹಾಡಿತು
ಪರಿಸರದ ಸೌಂದರ್ಯ ಸಾರಿತು

ಮಳೆ ಹನಿಯ ತಾಳಕ್ಕೆ
ಶೃತಿಯಂತೆ ಗಾಳಿಯ ವೇಗಕ್ಕೆ
ಕೋಗಿಲೆಯ ಇಂಪನು ಬೆರೆಸಿದೆ
ಸೂರ್ಯನಿಗೆ ಜೋಗುಳವ ಹಾಡಿದೆ

ಟಪಟಪನೆ ಮಳೆ ಬೀಳಲು
ಢವಢವನೆ ಮನ ಮಿಡಿಯಲು
ಒಂದಾಗಿದ್ದರು ಇಬ್ಬರೂ ಬೀಗುತ
ಬೆಳದಿಂಗಳಿಗೆ ಸ್ವಾಗತ ಕೋರುತ

ಮುಗಿಲನ್ನಪ್ಪಿ ಕುಳಿತಿದ್ದ ಮುದ್ದಾದ ಚಂದ್ರ
ಮಣ್ಣಿಂದ ಅರಳಿತು ಮಳೆಯ ಸುಗಂಧ
ಕಂಡಲ್ಲೇ ಕುಳಿತಳು ಭೂತಾಯಿಯ ಕಂದ
ಕಣ್ತುಂಬಿ ಬಂತು ವರ್ಣಿಸಲಾಗದ ಈ ಇರುಳಿನ ಅಂದ




– ಮೌಲ್ಯ ಎಸ್ ಗೌಡ
10ನೆ ತರಗತಿ 'ಇ' ವಿಭಾಗ

## ನಮ್ಮ ಮೈಸೂರು

ಚೆಲುವಿನ ಬೀಡು ಮೈಸೂರು
ಸಕಲ ಕಲೆಗಳ ನೆಲೆಬೀಡು
ಜ್ಞಾನದೇಗುಲಗಳ ತವರೂರು
ಕಾವೇರಿಯ ಕರುನಾಡು
ಒಡೆಯರು ಆಳಿದ ಹಿರಿಯೂರು


ಸಸ್ಯಶ್ಯಾಮಲೆಯ ಆಗರ
ಸಕಲ ಸಂಪತ್ತಿನ ಸಾಗರ
ನಮ್ಮಯ ಹೆಮ್ಮೆಯ ಊರು
ಸದಾ ಆನಂದದ ನೆಲೆಯೂರು
ಅದೇ ನಮ್ಮ ಮೈಸೂರು



– ರಿಷಾ ರಾಕೇಶ್ ಮಠ್
೯ನೆ ತರಗತಿ 'ಬಿ' ವಿಭಾಗ



## ಕನ್ನಡವಿದು ನಮ್ಮದು




ತಾಯಿ ಭಾರತಿಯ ಹಿರಿಮೆಯ ಪುತ್ರರೇ
ಭುವನೇಶ್ವರಿಯ ಅಂಶಜರೇ
ಕನ್ನಡಾಂಬೆಯ ಕರುಳಿನ ಕೂಗಿಗೆ
ಪ್ರೇಮದಿ ಇಂದು ಓಗೂಡಿರೋ
ಸ್ನೇಹದಿ ಇಂದು ಓಗೂಡಿರೋ

ಕಣಕಣದಲ್ಲೂ ಅಡಗಿಹ ಮಾತೆಯೇ
ನಮ್ಮನ್ನಿಂದು ನೀ ಪೋಷಿಸೋ ಭಾಷೆಯೇ
ಭಾಷೆಯ ಸೊಗಡನು ಸಾರುವ ಗೀತೆಯೇ
ಗೀತೆಯ ಬೆಡಗನು ಬೆಳೆಸೋ ಆಸೆಯೇ

ನನ್ನೀ ತನುಮನ ಆತ್ಮಗಳೆಲ್ಲವೂ
ನಿನ್ನದೇ ಉಡುಗೊರೆ ಓ ಜನನಿ
ನನ್ನೀ ನಗುವು, ನನ್ನೀ ಉಸಿರು
ನಿನ್ನದೇ ಭಿಕ್ಷೆಯು ಓ ಜನನಿ

ಕನ್ನಡ ಭಾಷೆಯು ಆತ್ಮದ ಅಮೃತ
ಮನಸನು ತಣಿಸುವ ಶಕ್ತಿಯದು
ನುಡಿಯಲು ಅಂದ ಕೇಳಲು ಚೆಂದ
ಕನ್ನಡವಿದು ಓ ನಮ್ಮದಿದು

ನಮ್ಮೀ ಮಾತೃವು ನಮ್ಮೀ ಭಾಷೆಯು
ಯುಗಯುಗಯುಗಗಳವರೆಗಿರಲಿ
ನಮ್ಮೀ ಪ್ರಾಣವು ಹೋದರು ಇಂದು
ನಮ್ಮೀ ಭಾಷೆಯು ಕೊನೆಗಿರಲಿ



– ಶರಣ್ಯ ಎಂ ಸಿ
9ನೆ ತರಗತಿ 'ಡಿ' ವಿಭಾಗ

## ಮಾಡ್ರನ್ ಮನೆ ವಿಳಾಸ

ಝೋಮ್ಯಾಟೋ ಗೆಳೆಯ ಹೋಗಿ ಬಾ ನಮ್ಮನೆಗೆ
ಸ್ವಿಗ್ಗಿ ಗೆಳೆಯ ಹೋಗಿ ಬಾ ನಮ್ಮನೆಗೆ ॥2॥

ನಿನ್ನ ಮನೆಯ ವಿಳಾಸ ನಾನೇನು ಬಲ್ಲೇನು
ಗೊತ್ತಿಲ್ಲ ನನಗೆ ಲೊಕೇಶನ್ ಕಳುಹಿಸು ಗೆಳತಿ
ಹೋಗಿ ಬರುವೆ ನಿನ್ನ ಮನೆಗೆ

ಬೋಗಾಧಿ ರಸ್ತೆ ಎಡಕ್ಕೆ ಬೀಡೋ ಹುಣಸೂರು ರಸ್ತೆ ಬಲಕ್ಕೆ ಬೀಡೋ
ನಟ್ಟನಡುವೇಲಿ ವಿಜಯನಗರ ನಾಲ್ಕನೇ ಹಂತದ ಹೆಬ್ಬಾಗಿಲು
ಅಲ್ಲಿಂದ ಎರಡು ಮೈಲಿ ದೂರದಲ್ಲೇ ನಮ್ಮನೆ

ಅಪಾರ್ಟ್‌ಮೆಂಟ್ ಮನೆ ಕಾಣೋ 208 ಮನೆ ನಂಬರ್ ಕಾಣೋ
ತೇಜು ಕಾರ್ನರ್ ನಮ್ಮ ಮನೆಗೆ ತುಂಬಾ ಹತ್ತಿರ ಕಾಣೋ
ಡಬಲ್ ರೋಡ್ ಕೊನೆಯಲ್ಲೇ ತೇಜು ಕಾರ್ನರ್ ಕಾಣೋ
ಡೆಲಿವರಿ ಗೆಳೆಯ ಹೋಗಿ ಬಾ ನಮ್ಮನೆಗೆ

ಎರಡನೆಯ ಹಂತ ತಲುಪಿ ಬಲಕ್ಕೆ ತಿರುಗಿದರೆ
ಭಕ್ತಿ ಎಂಬ ನಾಮಫಲಕದ 208 ನೆಯ ಮನೆ ಕಾಣೋ
ಬಾಗಿಲಿಗೆ ತೋರಣಕಟ್ಟಿ ಗಣಪತಿಗೆ ಗರಿಕೆ ಇಟ್ಟು
ರಂಗವಲ್ಲಿ ಬಿಡಿಸಿ ಹೊಸ್ತಿಲ ಪೂಜೆ ಮಾಡಿರುವುದೇ
ನಮ್ಮ ಮನೆ ಕಾಣೋ

ಝೊಮ್ಯಾಟೋ ಗೆಳೆಯ ಹೋಗಿ ಬಾ ನಮ್ಮನೆಗೆ
ಸ್ವಿಗ್ಗಿ ಗೆಳೆಯ ಹೋಗಿ ಬಾ ನಮ್ಮನೆಗೆ
ವಿಧವಿಧದ ತಿಂಡಿ ತಲುಪಿಸಿ ಬಾರೋ ನಮ್ಮನೆಗೆ





– ಭಾನವಿ ಎಚ್ ಶೆಟ್ಟಿ
7ನೆ ತರಗತಿ 'ಇ' ವಿಭಾಗ

## ಅಯ್ಯೋ ಮಳೆರಾಯ

ಮಳೆ ಬಂದಿತು ಮಳೆ ಬಂದಿತು
ಊರ ತುಂಬ ನೀರು ತುಂಬಿತು
ಗಿಡಗಳೆಲ್ಲಾ ಕೊಚ್ಚಿ ತೇಲಿತು
ಮರಗಳೆಲ್ಲಾ ಉರುಳಿ ಹೋಯಿತು
ರಸ್ತೆಗಳೆಲ್ಲಾ ಮುಳುಗಿತು
ಮನೆಯೊಳಗೆಲ್ಲಾ ಹರಿಯಿತು
ಅಯ್ಯಯ್ಯೋ! ಮಳೆರಾಯ
ಏತಕೆ ಅದೇ ಗೋಳುರಾಯ!



– ಅನ್ವೀಕ್ಷಾ ನಾಯಕ್
5ನೆ ತರಗತಿ 'ಡಿ' ವಿಭಾಗ

## ಜೀವನ


ಜೀವನವೇ ಏರುಪೇರಾ
ಏರುಪೇರೆ ಜೀವನವಾ
ಏರು ಪೇರಿಲ್ಲದ ಜೀವನವೆ ಜೀವನವು
ಹೇಳಣ್ಣಾ, ಸರಿ ಮಾಡಿಕೊಳ್ಳಬಹುದೆ ಇದನ್ನ?



– ಸಿದ್ಧಾಂತ್ ಶ್ರೀನಿವಾಸನ್
5ನೆ ತರಗತಿ 'ಬಿ' ವಿಭಾಗ

## ಚಿಟ್ಟೆ ಓ ಚಿಟ್ಟೆ

ಬಣ್ಣ ಬಣ್ಣದ ಚಿಟ್ಟೆಯೊಂದು ಹಾರಿ ಬಂದಿತು
ಹಾರಿ ಬಂದು ನಗುನಗುತ ಹೂವ ಮೇಲೆ ಕುಳಿತಿತು
ಮಕರಂದವನ್ನು ಆನಂದದಿಂದ ಹೀರುತಿತ್ತು
ಹಿಡಿಯಲು ಹೋದಾಗ ಹಾರಿಹೋಯಿತು.




–ಪರಿಣಿತ ಬಣಕಾರ
5ನೆ ತರಗತಿ 'ಬಿ' ವಿಭಾಗ

## ದ್ವಿಮುಖಾದಿ ಕದನಂ

ಹೇ ಮಾನವ
ಮಾಡದಿರುವ ನಾವು ಯುದ್ಧವ
ಮಾಡಿದರೆ ನಾವು ಪಡೆಯುವೆವು ದಂಡವ
ಕಳೆದುಕೊಂಡೇವು ನಾವು ಈ ಜಗವ
ಮುಂದೆ ಅನುಭವಿಸುವೆವು ಪಶ್ಚಾತ್ತಾಪವ
ಆವರಿಸುವುದು ಕಾರ್ಮೋಡದ ಮೌನವ
ಸಾರುವುದು ಹಗೆಯ ಶಾಖವ
ಭರಿಸಬೇಕು ಅದರ ಪಾಪವ

ಹೇ ಮಾನವ
ಆದರೂ ಮಾಡಬೇಕು ಒಂದು ಕದನವ
ಅದಾಗಲಿ ನಮ್ಮೊಳಗಿನ ಕೌರವ ಪಾಂಡವ
ಗೆಲ್ಲಲಿ ನಮ್ಮೊಳಗಿನ ಪಾಂಡವ
ಸೋಲಲಿ ನಮ್ಮೊಳಗಿನ ಕೌರವ
ಆಗ ನಾವಾಗುವೆವು ಉದ್ಧಾರ
ಈ ಮಾತು ಸತ್ಯ ಶತಸಿದ್ಧವ
ಮಾಡುವ ದೃಢ ನಿರ್ಧಾರವ
ಯೋಚಿಸಿ ಆಯ್ದುಕೊಳ್ಳುವ ನಮ್ಮ ಯುದ್ಧವ
ಅದರಿಂದಾಗೋಣ ನಾವೆಲ್ಲ ವಿಶ್ವಮಾನವ!



– ಸೊಹಾನಿ
11ನೆ ತರಗತಿ 'ಬಿ' ವಿಭಾಗ

## ಚಂದ್ರ

ಚಂದಾಮಾಮ ಬಂದ ರಾತ್ರಿಯಲ್ಲಿ
ಸಂತಸ ತಂದ ಮಕ್ಕಳ ಮನದಲ್ಲಿ
ಬಾನಂಗಳದಿ ಫಳಫಳ ಹೊಳಮ ಚೆಲ್ಲಿ
ಮನೆಮನಗಳಿಗೆ ಬೆಳಕು ಚೆಲ್ಲಿ



– ವೈಭವ್ ರಾಮ್ ಬಿ ಎಸ್
6ನೆ ತರಗತಿ 'ಬಿ' ವಿಭಾಗ